ಕಾರ್ಯದರ್ಶಿ (ಗಣಿ,ಜವಳಿ ಹಾಗೂ ಸಣ್ಣ ಪ್ರಮಾಣದ ಕೈಗಾರಿಕೆ) ಎಂದು ಬದಲಾಯಿಸಿ ಆದೇಶಿಸಿದೆ. ಅದರಂತೆ ಸರ್ಕಾರವು ದಿನಾಂಕ 13-1-2000ದಂದು ಒಂದು ಸುತ್ತೋಲೆ ಹೊರಡಿಸಿ ಪ್ರಧಾನ ಕಾರ್ಯದರ್ಶಿಗಳ ಬದಲಾಗಿ ಕಾರ್ಯದರ್ಶಿಗಳು ನಿಯಮ 11ರ ಸಮಿತಿಯ ಅಧ್ಯಕ್ಷತೆ ವಹಿಸುವರೆಂದು ತಿಳಿಸಲಾಗಿದೆ.

ಈ. ಪ್ರಧಾನ ಕಾರ್ಯದರ್ಶಿಯವರಿಗೆ ಕಾರ್ಯಬಾಹುಳ್ಯದಿಂದಾಗಿ ಕಾಲಾವಕಾಶವಾಗುವುದಿಲ್ಲ. ಅಲ್ಲದೇ ಗಣಿ ವಿಷಯವನ್ನು ಕಾರ್ಯದರ್ಶಿಯವರೇ ನಿರ್ವಹಿಸುತ್ತಿರುವುದರಿಂದ ಅವರೇ ನಿಯಮ 11, ಸಮಿತಿಯ ಅಧ್ಯಕ್ಷತೆ ವಹಿಸುವುದು ಸೂಕ್ತ.

ಗ್ರಾನೈಟ್ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ.

2446(3098)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ): ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದ ವಿವಿಧ ಗ್ರಾನೈಟ್ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬರಬೇಕಾದ ಬಾಕಿ ಎಷ್ಟು? ಯಾವ ಸಾಲಿನಿಂದ ಬಾಕಿ ಇದೆ?

ಆ. ಈ ಬಾಕಿ ವಸೂಲಿ ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು):

ಅ. 1998-99ನೇ ಅಂತ್ಯದವರೆಗೆ ರೂ.255.20 ಲಕ್ಷ.

ಆ. ಈ ಬಾಕಿಯನ್ನು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮ 1994ರ ನಿಯಮ 39ರಂತೆ ''ಭೂ ಕಂದಾಯ ಬಾಕಿ'' ಎಂದು ಪರಿಗಣಿಸಿ ಸಂಬಧಪಟ್ಟ ಜಿಲ್ಲಾಧಿಕಾರಿ ಮೂಲಕ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುತ್ತದೆ.

ಮೈಸೂರು ಮಿನರಲ್ಸ್ ಸಂಸ್ಥೆಯಲ್ಲಿನ ನಷ್ಟ.

2447(3100)

ಶ್ರೀ ವಿಶ್ವೇಶ್ವರ ಹೆಗ್ಗಡೆ ಕಾಗೇರಿ (ಅಂಕೋಲ): ಮಾನ್ಯ ಗಣಿ ಮತ್ತು ಭೂ ವಿಜ್ಞಾನ